# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : **2718-A** |
| ಸದಸ್ಯರ ಹೆಸರು | : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ಸಚಿವರು | : ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : 25-03-2022 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಮಣಿಪಾಲ್ ಟೆಕ್ನಾಲಜೀಸ್ ಸಂಸ್ಥೆಯು ಕಾನೂನು ಬಾಹಿರವಾಗಿ ಅಕ್ರಮವೆಸಗಿ ಉನ್ನತ ಮಟ್ಟದ ಸಾರಿಗೆ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸಂಸ್ಥೆಯ ಮೇಲೆ ಹೂಡಲಾದ ಎಫ್.ಐ.ಆರ್ ಕ್ರಿಮಿನಲ್ ಮೊಕದ್ದಮೆಗಳು ಹಾಗೂ ಚಾರ್ಜ್ ಶೀಟ್ ಗಳನ್ನು ಮರೆಮಾಚಿ, ಹಲವಾರು ಟೆಂಡರ್ ಗಳನ್ನು ಸಾರಿಗೆ ಇಲಾಖೆಗೆ ವಹಿಸಿ ವಂಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ವಾಯುಮಾಲಿನ್ಯ ತಪಾಸಣಾ ಕೇಂದ್ರಗಳನ್ನು ನೆಟ್‌ವರ್ಕಿಂಗ್ ಜಾಲದಲ್ಲಿ ಅಳವಡಿಸುವ ಸಲುವಾಗಿ ದಿನಾಂಕ:06-03-2019 ರಂದು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಅನ್ನು ಕರೆಯಲಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಿದ ಬಿಡ್ಡುದಾರರನ್ನು ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ಪರಿಶೀಲನೆ ನಡೆಸಿ ಎಲ್1 ಮತ್ತು ಎಲ್2 ಬಿಡ್ಡುದಾರರನ್ನು ಅಂತಿಮಗೊಳಿಸಲಾಗಿತ್ತು. ಎಲ್1 ಬಿಡ್ಡುದಾರರಾದ ಮೆ// ಮಣಿಪಾಲ್ ಟೆಕ್ನಾಲಜೀಸ್ ರವರು ಈ ಹಿಂದೆ ಮಹಾರಾಷ್ಟ್ರ ರಾಜ್ಯದಲ್ಲಿ ಟೆಂಡರ್ ಪ್ರಕ್ರಿಯೆಗೆ ಸಂಬಂಧಪಟ್ಟಂತೆ ಕಪ್ಪು ಪಟ್ಟಿಗೆ ಸೇರ್ಪಡೆಯಾಗಿದ್ದರ ವಿಷಯವನ್ನು ಟೆಂಡರಿನ ಘೋಷಣಾ ಪತ್ರದಲ್ಲಿ ಬಹಿರಂಗ ಪಡಿಸಿಲ್ಲವಾದ್ದರಿಂದ ಮತ್ತು ಟೆಂಡರಿನ ನಿಬಂಧನೆಗಳ ಉಲ್ಲಂಘನೆಗಾಗಿ ಸರ್ಕಾರದ ಪತ್ರ ಸಂ.: ಟಿಡಿ 85 ಟಿಡಿಟಿ 2019, ಬೆಂಗಳೂರು, ದಿನಾಂಕ:19-02-2021 ರನ್ವಯ ಸದರಿ ಟೆಂಡರ್ ಅನ್ನು ರದ್ದುಗೊಳಿಸಲಾಯಿತು. |
| ಆ. | ಕಳೆದ ಮೂರು ವರ್ಷಗಳಿಂದ ಮಣಿಪಾಲ್ ಟೆಕ್ನಾಲಜೀಸ್ ಸಂಸ್ಥೆ ಹಾಗೂ ಅದರ ಅಂಗ ಸಂಸ್ಥೆಗಳಿಗೆ ಸಾರಿಗೆ ಇಲಾಖೆ ವತಿಯಿಂದ ಎಷ್ಟು ಕಾಮಗಾರಿಗಳನ್ನು ಎಷ್ಟು ಮೊತ್ತದ ಆದೇಶವನ್ನು ನೀಡಲಾಗಿದೆ ; (ಪೂರ್ಣ ವಿವರ ನೀಡುವುದು) | ಈ ಹಿಂದೆ ಬೃಹತ್ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ಸಂಬಂಧಿಸಿದ ಟೆಂಡರ್ ಪ್ರಸ್ತಾವನೆಯಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಮುಖ್ಯ ಕಾನೂನು ಅಧಿಕಾರಿಯವರ ಅಭಿಪ್ರಾಯ ಪಡೆದು M/S. MCT Cards and Technology Ltd., ಇವರನ್ನು ಟೆಂಡರ್ ಪ್ರಕ್ರಿಯೆಯಲ್ಲಿ ಮುಂದುವರೆಸಲಾಗಿರುತ್ತದೆ.<br>ಕ್ರಮ ಸಂಖ್ಯೆ (ಅ) ರಲ್ಲಿ ಉತ್ತರಿಸಿರುವಂತೆ ರದ್ದುಪಡಿಸಿರುವ ಟೆಂಡರ್ ಅನ್ನು, ವಾಯುಮಾಲಿನ್ಯ ತಪಾಸಣಾ ಕೇಂದ್ರಗಳನ್ನು ನೆಟ್‌ವರ್ಕಿಂಗ್ ಜಾಲದಲ್ಲಿ ಅಳವಡಿಸುವ ಸಲುವಾಗಿ ಪುನಃ ದಿನಾಂಕ:25-10-2021 ರಂದು ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್ ಗೆ ಸಂಬಂಧಿಸಿದಂತೆ ನಡೆದ Technical Evaluation ಸಭೆಯಲ್ಲಿ ಸಮಿತಿಯವರು ತೆಗೆದುಕೊಂಡ ನಿರ್ಣಯದಂತೆ, ಟೆಂಡರಿಗೆ ಅರ್ಜಿ ಸಲ್ಲಿಸಿದ ಇಬ್ಬರು ಬಿಡ್ಡುದಾರರಾದ ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ.ಲಿ. ಮತ್ತು ಮೆ// ಎವಿಎಲ್ ಇಂಡಿಯಾ ಪ್ರೈ. |



Generated from eOffice by B SREERAMULU, TD-MIN(BS), TRANSPORT MINISTER, Trans on 24/03/2022 03:21 PM

ಲಿ.ರವರು ಟೆಕ್ನಿಕಲ್ ತಾಂತ್ರಿಕ ಅರ್ಹತೆಯನ್ನು ಪಡೆದಿರುತ್ತಾರೆ.

ದಿನಾಂಕ:19-11-2021 ರಂದು Technical Evaluation ರಲ್ಲಿ ಅರ್ಹತೆ ಪಡೆದ ಇಬ್ಬರು ಬಿಡ್ದುದಾರರು ಪರಿಕಲ್ಪನೆಯ ಪುರಾವೆಯನ್ನು(Proof of Concept) ಪಿಪಿಟಿ(PPT)ಯೊಂದಿಗೆ ಮತ್ತು ಪರಿಕಲ್ಪನೆಯ ಪುರಾವೆಯ (Proof of Concept) ಸಂಬಂಧ ನೇರ ಪ್ರದರ್ಶನವನ್ನು (Live Demonstration) ವಾಯುಮಾಲಿನ್ಯ ತಪಾಸಣಾ ಕೇಂದ್ರದಲ್ಲಿ ಸಮಿತಿಯ ಮುಂದೆ ಪ್ರಸ್ತುತಪಡಿಸಿರುತ್ತಾರೆ.

ದಿನಾಂಕ:01-12-2021 ರಂದು ತಾಂತ್ರಿಕ ಮೌಲ್ಯಮಾಪನ ಮತ್ತು ಅರ್ಹ ಬಿಡ್ದುದಾರರಿಂದ ಪರಿಕಲ್ಪನೆಯ ಪುರಾವೆಯಲ್ಲಿ (Proof of Concept) ಅರ್ಹತೆ ಪಡೆದ ಬಿಡ್ದುದಾರರು ಸಲ್ಲಿಸಿರುವ ಹಣಕಾಸಿನ ಪ್ರಸ್ತಾವನ್ನು ಅಂತಿಮಗೊಳಿಸುವ ಸಂಬಂಧ ಸಭೆ ನಡೆಸಿ Techno Commercial Evaluation ಅಂಕಗಳನ್ನು ಲೆಕ್ಕಾಚಾರ ಮಾಡಿದ ನಂತರ

ಸಮಿತಿಯು ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ., ಮಣಿಪಾಲ ರವರು ಅತಿ ಕಡಿಮೆ ದರ ನಮೂದು ಮಾಡಿರುವುದರಿಂದ ಎಲ್1 (L1) ಬಿಡ್ದುದಾರರು ಎಂದು ಸಮಿತಿಯವರು ತೀರ್ಮಾನಿಸಿರುತ್ತಾರೆ.

ಸದರಿ ಕರೆಯಲಾದ ಟೆಂಡರಿನಲ್ಲಿ ಬಿಡ್ದುದಾರರಾದ ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ.,ರವರು ಮೆ// ಮಣಿಪಾಲ್ ಟೆಕ್ನಾಲಜೀಸ್ ಪ್ರೈ. ಲಿ.ರವರ ಅಂಗ ಸಂಸ್ಥೆಯಾಗಿರುವುದು ಕಂಡುಬರುತ್ತದೆ.

ದಿನಾಂಕ:02-12-2021 ರಂದು ಮಾನ್ಯ ವಿಧಾನ ಪರಿಷತ್ತಿನ ಅರ್ಜಿ ಸಮಿತಿ ಸಭೆಯಲ್ಲಿ ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ.,ರವರು ಮೆ// ಮಣಿಪಾಲ್ ಟೆಕ್ನಾಲಜೀಸ್ ಪ್ರೈ. ಲಿ.ರವರ ಅಂಗ ಸಂಸ್ಥೆಯಾಗಿರುವ ಕಾರಣ ಸದರಿಯವರಿಗೆ ಕಾರ್ಯಾದೇಶ ನೀಡುವ ಬಗ್ಗೆ ಕಾನೂನು ಇಲಾಖೆಯ ಹಾಗೂ ಅಡ್ವೋಕೇಟ್ ಜನರಲ್ ರವರ ಅಭಿಪ್ರಾಯ ಪಡೆದು ಮುಂದುವರೆಯಲು ಸೂಚಿಸಿರುತ್ತಾರೆ.

ಮೆ// ಎವಿಎಲ್ ಇಂಡಿಯಾ ಪ್ರೈ. ಲಿ.ರವರು ಪತ್ರ AVL/NET/TC-4/KAR/009/2021-22 ದಿ:08-12-2021ರ ಪತ್ರದಲ್ಲಿ ಮೆ// ಎವಿಎಲ್ ಇಂಡಿಯಾ ಪ್ರೈ. ಲಿ.ರವರು 2019ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ವಾಯುಮಾಲಿನ್ಯ ತಪಾಸಣಾ ಕೇಂದ್ರಗಳನ್ನು ನೆಟ್‌ವರ್ಕಿಂಗ್ ಜಾಲದಲ್ಲಿ ಅಳವಡಿಸುವ ಸಂಬಂಧ ಕರೆಯಲಾದ ಟೆಂಡರಿನಲ್ಲಿ ಎಲ್1 (L1) ಬಿಡ್ದುದಾರರಾಗಿ ಆಯ್ಕೆಯಾದ ಮೆ// ಮಣಿಪಾಲ್ ಟೆಕ್ನಾಲಜೀಸ್ ಪ್ರೈ. ಲಿ.ರವರು ಕ್ರಿಮಿನಲ್ ಹಿನ್ನಲೆಯನ್ನು ಹೊಂದಿರುವುದನ್ನು ಮರೆಮಾಚಿರುವುದರಿಂದ ಅನರ್ಹಗೊಂಡಿರುತ್ತಾರೆ ಮತ್ತು ಮೆ// ಮಣಿಪಾಲ್ ಟೆಕ್ನಾಲಜೀಸ್ ಪ್ರೈ. ಲಿ.ರವರು ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ.,ನ ಶೇಕಡ 80% ಷೇರನ್ನು ಹೊಂದಿರುತ್ತಾರೆಂದು ಹಾಗೂ ಅದರ ಅಂಗ ಸಂಸ್ಥೆಯಾಗಿರುತ್ತಾರೆಂದು ತಿಳಿಸಿರುತ್ತಾರೆ. ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ.,ನವರು ವಾಯುಮಾಲಿನ್ಯ ತಪಾಸಣಾ ಕೇಂದ್ರಗಳನ್ನು ನೆಟ್‌ವರ್ಕಿಂಗ್ ಜಾಲದಲ್ಲಿ ಅಳವಡಿಸುವ ಸಂಬಂಧ



Generated from eOffice by B SREERAMULU, TD-MIN(BS), TRANSPORT MINISTER, Trans on 24/03/2022 03:21 PM

DFA/705857

| | | |
|---|---|---|
| | | ಯಾವುದೇ ಯೋಜನೆಯಲ್ಲಿ ಅನುಭವ ಹೊಂದಿರುವುದಿಲ್ಲ ವೆಂದು ತಿಳಿಸುತ್ತಾ, ಪ್ರಸ್ತುತ ಟೆಂಡರಿನಲ್ಲಿ ಭಾಗವಹಿಸಿರುವ ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ., ರವರನ್ನು ಪರಿಗಣಿಸಬಾರದೆಂದು ಮನವಿ ಮಾಡಿರುತ್ತಾರೆ.<br>ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ರಾಜ್ಯದಲ್ಲಿ ವಾಯುಮಾಲಿನ್ಯ ತಪಾಸಣಾ ಕೇಂದ್ರಗಳನ್ನು ನೆಟ್‌ವರ್ಕಿಂಗ್ ಜಾಲದಲ್ಲಿ ಅಳವಡಿಸುವ ಸಂಬಂಧ ಪ್ರಸ್ತುತ ಕರೆಯಲಾದ ಟೆಂಡರಿನಲ್ಲಿ ಎಲ್1 ಬಿಡ್ಡುದಾರರಾದ ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ. ರಲ್ಲಿ ಶೇಕಡ 80% ಷೇರನ್ನು ಮೆ// ಮಣಿಪಾಲ್ ಟೆಕ್ನಾಲಜೀಸ್ ಪ್ರೈ. ಲಿ. ರವರು ಹೊಂದಿದ್ದು, ಆದರ ಅಂಗ ಸಂಸ್ಥೆಯಾಗಿರುತ್ತಾರೆ. ಕಾರಣ, ಮೆ// ಎಮ್‌ಸಿಟಿ ಕಾರ್ಡ್ಸ್ ಅಂಡ್ ಟೆಕ್ನಾಲಜಿ ಪ್ರೈ. ಲಿ. ರವರನ್ನು ಪರಿಗಣಿಸುವ ಬಗ್ಗೆ ಕಾನೂನು ಇಲಾಖಾ ಅಭಿಪ್ರಾಯ ಪಡೆಯಲಾಗಿದ್ದು, ಅಡ್ವೋಕೇಟ್ ಜನರಲ್‌ರವರ ಅಭಿಪ್ರಾಯ ಕೋರಲಾಗಿರುತ್ತದೆ. |
| ಇ. | ಹಾಗಾದಲ್ಲಿ, ಸದರಿ ಸಂಸ್ಥೆ ಹಾಗೂ ತಪ್ಪಿತಸ್ಥ ಸಾರಿಗೆ ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕಾನೂನು ಕ್ರಮಗಳೇನು ? | ಅನ್ವಯಿಸುವುದಿಲ್ಲ. |

ಟಿಡಿ 65 ಟಿಡಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ
ಪಂಗಡಗಳ ಕಲ್ಯಾಣ ಸಚಿವರು.



Generated from eOffice by B SREERAMULU, TD-MIN(BS), TRANSPORT MINISTER, Trans on 24/03/2022 03:21 PM